ಹುದ್ದೆ ಭರ್ತಿಯಾಗಿದ್ದು, 5 ಹುದ್ದೆ ಖಾಲಿ ಇದೆ ಒಂದು ಸಹಾಯಕ ನಿರ್ದೇಶಕರ ಹುದ್ದೆ ಖಾಲಿ ಇದೆ ಇತರೆ 45 ಸಿಬ್ಬಂದಿಗಳಲ್ಲಿ 43 ಜನ ಕಾರ್ಯನಿರ್ವಹಿಸುತ್ತಿದ್ದು 2 ಹುದ್ದೆ ಮಾತ್ರ ಖಾಲಿ ಇದೆ

(ಈ) ಸರ್ಕಾರದ ಆದೇಶದ ಪ್ರಕಾರ 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕಟಣೆ ಹೊರಡಿಸಲಾಗಿದೆ ಅಲ್ಲದೇ ನೇರ ನೇಮಕಾತಿ ಕೋಟಾದ ಅಡಿಯಲ್ಲೂ 90 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ನೇರ ನೇಮಕಾತಿ ಮುಖಾಂತರ ಖಾಲಿ ಹುದ್ದೆಗಳನ್ನು ತುಂಬಲು ವೇಳೆ ತಗಲುವುದರಿಂದ ಸದ್ಯಕ್ಕೆ ಖಾಲಿ ಇರುವ ಸಹಾಯಕ ನಿರ್ದೆಶಕರ ಹುದ್ದೆಗಳನ್ನು ಪಶು ವೈದ್ಯಾಧಿಕಾರಿಗಳಿಗೆ ಮುಂಬಡ್ತಿ ಮುಖೇನ ತಾತ್ಕಾಲಿಕವಾಗಿ ಸ್ವಯಂವೇತನ ಶ್ರೇಣಿಯ ಮೇರೆಗೆ (ಓಪಿಜಿ) ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ ಮತ್ತು ಪಶು ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮದಡಿ ರಾಜ್ಯಾದ್ಯಂತ 276 ಪಶು ವೈದ್ಯಾಧಿಕಾರಿಗಳನ್ನು ತುಂಬಲು ಪ್ರಕಟಣೆ ಹೊರಡಿಸಿ, ಅರ್ಜಿ ಆಹ್ವಾನಿಸಲಾಗಿದ್ದು, ಬಂದಿರುವ ಅರ್ಜಿಗಳು ಪರಿಶೀಲನೆಯಲ್ಲಿದೆ ಮುಂಬಡ್ತಿ ಪ್ರಕ್ರಿಯೆ ಹಾಗೂ ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಬೀಳಗಿ ತಾಲ್ಲೂಕಿನಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಮತ್ತು ಪಶು ವೈದ್ಯಾಧಿಕಾರಿಗಳ ಹುದ್ದೆಗೆ ನೇಮಕ ಮಾಡಲೂ ಸಹ ಕ್ರಮ ಕೈಗೊಳ್ಳಲಾಗುವುದು

(ಉ) ಸರ್ಕಾರದ ಆದೇಶ ಸಂಖ್ಯೆ ಪಸಂಮೀ 170 ಪಸಸೆ 2006 ಬೆಂಗಳೂರು, ದಿನಾಂಕ 01–03–2007ರ ಪ್ರಕಾರ ಬೀಳಗಿ ತಾಲ್ಲೂಕು ಹಗ್ಗೂರ ಗ್ರಾಮದಲ್ಲಿ ಪಶು ಚಿಕಿತ್ಸಾಲಯವನ್ನು ನೂತನವಾಗಿ ಪ್ರಾರಂಭಿಸಲಾಗಿದ

ಬೀಳಗಿ ತಾಲ್ಲೂಕಿನಲ್ಲಿ 48828 ಜಾನುವಾರು ಘಟಕಗಳಿದ್ದು ಅವುಗಳಿಗೆ ಪ್ರತಿ 500 ಜಾನುವಾರು ಘಟಕಗಳಿಗೆ ಒಂದರಂತೆ 10 ಪಶುಚಿಕಿತ್ಸಾ ಕೇಂದ್ರಗಳು ಇರಬೇಕಾಗಿದ್ದು 13ಪಶುವೈದ್ಯಕೀಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಪಶುಚಿಕಿತ್ಸಾಲಯ ಕೊರತೆ ಇರದ ಬೀಳಗಿ ತಾಲ್ಲೂಕು ಒಳಗೊಂಡಂತೆ ಇತರೆ ತಾಲ್ಲೂಕುಗಳಲ್ಲಿಯೂ ಸಹ, ಹೊಸ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಸರ್ಕಾರ ಯಾವುದೇ ಕಾಲಮಿತಿ ನಿಗದಿಪಡಿಸಿಲ್ಲ ಆದರೆ ಡಾ ಡಿ ಎಂ ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನಾ ವರದಿಯ ಪ್ರಕಾರ ಪಶುಚಿಕಿತ್ಸಾಲಯ ಕೊರತೆ ಇರುವ ಅತೀ ಹಿಂದುಳಿದ ತಾಲ್ಲುಕುಗಳಲ್ಲಿ ಮಾತ್ರ ಹೊಸ ಪಶುಚಿಕಿತ್ಸಾಲಯ ತೆರೆಯಲು ಕಾರ್ಯಕ್ರಮ ಜಾರಿಯಲ್ಲಿರುತ್ತದೆ

654 (700) ಶ್ರೀಮತಿ ಪರಿಮಳ ಕೆ ಎಸ್ (ಹನೂರು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಎಲ್ಲೆಲ್ಲಿ ಎ ಎನ್ ಎಂ ಕೇಂದ್ರಗಳಿವೆ ,

ಆ ಈ ಕೇಂದ್ರಗಳಲ್ಲಿ ಎಲ್ಲಾ ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿವೆಯೇ ,

ಇ ಇಲ್ಲದಿದ್ದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು ?

ಈ ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಎ ಎನ್ ಎಂ ಕೇಂದ್ರಗಳನ್ನು ಪ್ರಾರಂಭಿಸುವಂತೆ ಸರ್ಕಾರಕ್ಕೆ ಕೋರಿಕೆ ಬಂದಿದೆಯೇ ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಿಂದ ಕೋರಿಕೆ ಬಂದಿದೆ ?

ಉ ಹಾಗಿದ್ದಲ್ಲಿ, ಈ ಸ್ಥಳಗಳಲ್ಲಿ ಎ ಎನ್ ಎಂ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) 48 ಕೇಂದ್ರಗಳಲ್ಲಿ 42 ಎ ಎನ್ ಎಂ ಗಳು ಕರ್ತವ್ಯ ನಿರ್ವಹಿಸುತ್ತಿದ್ದು 6 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ಹುದ್ದೆಗಳು ಖಾಲಿ ಇರುತ್ತದೆ

ಇ) ರಾಜ್ಯದಲ್ಲಿ 23 ಆರೋಗ್ಯ ಸಹಾಯಕಿಯರ ತರಬೇತಿ ಶಾಲೆಗಳು ಇದ್ದು, ಇದರಲ್ಲಿ ಪ್ರತಿ ವರ್ಷ 720 ಅಭ್ಯರ್ಥಿಗಳು 18 ತಿಂಗಳ ತರಬೇತಿ ಪಡೆದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಯಾರು ಇರುವುದಿಲ್ಲ ತರಬೇತಿ ಪಡೆದು ಉತ್ತೀರ್ಣರಾಗಿ ಬಂದಂತಹವರಿಗೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು

ಈ) ಯಾವುದೇ ಕೋರಿಕೆ ಬಂದಿಲ್ಲ

ಉ) ಉದ್ಭವಿಸುವುದಿಲ್ಲ

ಅಡಕ –1

	ಪ್ರಾ. ಆ ಕೇಂದ್ರ		**ಉಪಕೇಂದ್ರ**	
1)	ಕೂಡ್ಲರು	1)	ಕೂಡ್ಲರು	
		2)	ಹೂಗ್ಯಂ	
		3)	ಮಿಣ್ಯಂ	
2)	ಮಾರ್ಜಳ್ಳಿ	4)	ಮಾರ್ಜಳ್ಳಿ	
		5)	ಹಳೇ ಮಾರ್ಜಳ್ಳಿ ಒಡಕೆಹಳ್ಳಿ	
3)	ಎಂ ಎಂ ಪಿಲ್ಸ್	7)	ಎಂ ಎಂ ಪಿಲ್ಸ್ (ಎ)	
		8)	ಎಂ ಎಂ ಪಿಲ್ಸ್ (ಬಿ)	
		9)	ಗೋಪಿನಾಥಂ	
4)	ಹೊನ್ನಾಳಿ	10)	ಹೊನ್ನಾಳಿ	
5)	ಖಂಡಳ್ಳಿ	11)	ಖಂಡಳ್ಳಿ	
		12)	ಭಾಗ್ಯಂ	
6)	ಚೌದಳ್ಳಿ	13)	ಚೌದಳ್ಳಿ	
		14)	ಶೆಟ್ಟಿಹಳ್ಳಿ	ಶೆಟ್ಟಿಹಳ್ಳಿ

			ಉಪ ಕೇಂದ್ರದಲ್ಲಿ ಎ ಎನ್ ಎಂ ಹುದ್ದೆ ಖಾಲಿ ಇದೆ
7)	ರಾಮಪುರ	15) ರಾಮಪುರ (ಎ)	
		16) ರಾಮಪುರ (ಬಿ)	
		17) ಬಸಪ್ಪನ ದೊಡ್ಡಿ	
		18) ಅಜ್ಜಿಪುರ	
		19) ಕುರುಬನ ದೊಡ್ಡಿ	
		20) ದಿನ್ನಳ್ಳಿ	ದಿನ್ನಳ್ಳಿ ಉಪ ಕೇಂದ್ರದಲ್ಲಿ ಎ ಎನ್ ಎಂ ಹುದ್ದೆ ಖಾಲಿ ಇದೆ
		21) ಕೆಂಪಯ್ಯನ ಪಲ್ಲಿ	
8)	ಕಾಮಗೆರೆ	22) ಕಾಮಗೆರೆ	
		23) ಕೊಂಗರ ಹಳ್ಳಿ	
		24) ಸಿಂಗನಲ್ಲೂರು	
		25) ಹೊಂಡರಬಾಳು	
9)	ಪಾಳ್ಯ	26) ಪಾಳ್ಯ (ಎ)	
		27) ಪಾಳ್ಯ (ಬಿ)	
		28) ಕೊತನೂರು	
		29) ತಳ್ಳನೂರು	
		30) ಸಉಗನೀಯ	
10)	ಪಿ ಜಿ ಪಾಳ್ಯ	31) ಪಿ ಜಿ ಪಾಳ್ಯ	
		32) ಒಡೆಯರಪಾಳ್ಯ	
		33) ಗುಂಡಿಮಾಳ	
		34) ಬಿ ಆರ್ ಆರ್ ಬ್ಯಾಂಕ್	
11)	ದೊಡ್ಡಿಂದುವಾಡಿ	35) ದೊಡ್ಡಿಂದುವಾಡಿ (ಎ)	
		36) ದೊಡ್ಡಿಂದುವಾಡಿ(ಬಿ)	
		37) ಇಕ್ಕಡ ಹಳ್ಳಿ	
		38) ಕೆಂಪನಪಾಳ್ಯ	
		39) ಬಸ್ತಿಪುರ	
12)	ಹನೂರು	40) ಹನೂರು (ಎ)	
		41) ಹನೂರು (ಬಿ)	
		42) ಮಂಗಲ	
		43) ನೇರವಾಡ	
		44) ಮಾಣಗಟ್ಟಿ	
		45) ಎಲೇಮಾಳ	
13)	ಲೊಕ್ಕನ ಹಳ್ಳಿ	46) ಲೊಕ್ಕನ ಹಳ್ಳಿ	

47) ಕಣ್ಣೂರು
48) ಚಿಕ್ಕಮಾಲಪುರ ಚಿಕ್ಕಮಾಲಪುರ ಉಪ ಕೇಂದ್ರದಲ್ಲಿ ಎ ಎನ್ ಎಂ ಹುದ್ದೆ ಖಾಲಿ ಇದೆ

655 (701) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹನೂರಿನಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವಂತೆ ಹಲವಾರು ವರ್ಷಗಳಿಂದ ಕೋರಿಕೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಈವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು ,

ಇ) ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಇರುವ ತೊಂದರೆಗಳೇನು ,

ಈ) ಹಾಗಿದ್ದಲ್ಲಿ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು ಯಾವಾಗ ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಂದಿದ

ಆ) ಬಂದಿರುವ ಪ್ರಸ್ತಾವನೆಯನ್ನು ಮಾರ್ಗಸೂಚಿ ಪ್ರಕಾರ ಪರೀಶೀಲಿಸಲಾಗುವುದು

656 (702) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಚಾಮರಾಜನಗರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ,

ಆ) ಈ ಪೈಕಿ ಭರ್ತಿಯಾದ ಹುದ್ದೆಗಳೇಷ್ಟು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ? (ಆಸ್ಪತ್ರೆವಾರು ವಿವರ ನೀಡುವುದು) ,

ಇ) ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ ,

ಈ) ಹಾಗಿದ್ದಲ್ಲಿ, ಖಾಲಿ ಯಿರುವ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) --

ಅ) ಚಾಮರಾಜನಗರ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಹುದ್ದೆಗಳ ಸಂಖ್ಯೆ 90)ಆಸ್ಪತ್ರೆವಾರು ವಿವರಗಳನ್ನು ಅನುಬಂದ–1ರಲ್ಲಿ ನೀಡಿದೆ)

ಆ) ಈ ಪೈಕಿ ಭರ್ತಿಯಾದ ಹುದ್ದೆಗಳ ಸಂಖ್ಯೆ 8 (ಆಸ್ಪತ್ರೆವಾರು ವಿವರಗಳನ್ನು